


# ಡಾ. ನಾಗರಾಜು ಜಿ.ಬಿ. ಭೈರೇನಹಳ್ಳಿ

ಕಲೆ: ಮುರಳೀಧರ್ ರಾಥೋಡ್


ಎಂತಹ ಕಾಲ ಬಂತಪ್ಪ? ಇನ್ನೂ ಏನೇನು ಈ ಕಣ್ಣಿನಲ್ಲಿ ನೋಡಬೇಕೋ? ಎಂದು ಸೋಮನಹಳ್ಳಿ ಜನ ಮಾತನಾಡಿಕೊಂಡರು. 'ನಾಯಿ ಮನುಷ್ಯನನ್ನು ಕಚ್ಚಿದ್ದು ಸುದ್ದಿಯಲ್ಲ, ಮನುಷ್ಯ ನಾಯಿಯನ್ನು ಕಚ್ಚಿದ್ದು ನಿಜವಾದ ಸುದ್ದಿ' ಎಂಬಂತೆ ಟಿವಿಯ ವರದಿಗಾರನಿಗೇ ಸುಬ್ಬಮ್ಮ ತಲೆಬುರುಡೆ ಬಿಚ್ಚಿಕೊಳ್ಳುವಂತೆ ಬಾರಿಸಿದ್ದು ಆ ಕುಗ್ರಾಮದಲ್ಲಿ ಬ್ರೇಕಿಂಗ್ ನ್ಯೂಸ್ ಆಗಿತ್ತು. ಹಾಗೆ ಸುಬ್ಬಮ್ಮನಿಂದ ತಲೆಗೆ ಪೆಟ್ಟು ತಿಂದ ಸದರಿ ವರದಿಗಾರನು 'ಸುಬ್ಬಮ್ಮನಿಗೆ ಮಗನನ್ನು ಕಳೆದುಕೊಂಡು ಬುದ್ಧಿಭ್ರಮಣೆಯಾಗಿದೆಯೆಂದೂ, ಸಿಕ್ಕ ಸಿಕ್ಕವರಿಗೆ ಹೊಡೆಯುವುದೂ, ಕಲ್ಲು ತೂರುವುದೂ ಮಾಡುತ್ತಿದ್ದಾಳೆಂದೂ' ಬ್ಯಾಂಡೇಜ್ ಸುತ್ತಿದ್ದ ತಲೆಯನ್ನು ಕರ್ನಾಟಕ ಜನತೆಗೆ ತೋರಿಸುವ ಮೂಲಕ ತನ್ನ ಚಾನೆಲ್‌ನ ವೀಕ್ಷಕರನ್ನು ಹೆಚ್ಚಿಸುವ ಪ್ರಯತ್ನ ಮಾಡುತ್ತಿದ್ದ. ಆದರೆ, ಆ ಬ್ರೇಕಿಂಗ್ ನ್ಯೂಸನ್ನು ನೋಡುತ್ತಿದ್ದ ಕರ್ನಾಟಕ ಜನತೆ ಸುಬ್ಬಮ್ಮನ ಮಾನಸಿಕ ಸ್ಥಿತಿಗೆ ಕೋಪಿಸಿಕೊಳ್ಳುವ ಬದಲು ಯುದ್ಧದಲ್ಲಿ ಮಗನನ್ನು ಕಳೆದುಕೊಂಡ ಆಕೆಯ ಪರಿಸ್ಥಿತಿ ಕಂಡು ಮಮ್ಮಲ ಮರುಗಿತು. ಸೋಮನಹಳ್ಳಿಯೆಂಬ ಕುಗ್ರಾಮದಲ್ಲಿ ವಾಸವಾಗಿರುವ ಅನಕ್ಷರಸ್ಥೆ ವಿಧವೆಯಾದ ಸುಬ್ಬಮ್ಮನ ಸ್ಥಿತಿಗೆ ಕರ್ನಾಟಕ ಶೋಕ ವ್ಯಕ್ತಪಡಿಸಲು ಕಾರಣ, ಆಕೆಯ ಒಬ್ಬನೇ ಮಗ ಪಾಕಿಸ್ತಾನದ ಜೊತೆಯಲ್ಲಿ ನಡೆದ ಯುದ್ಧದಲ್ಲಿ ಹುತಾತ್ಮನಾಗಿದ್ದ.

ಈ ಘಟನೆ ಅಲ್ಲಿ ನಡೆದ ದಿನ ಎಂದಿನಂತೆ ಸುಬ್ಬಮ್ಮನು ಇನ್ನೂ ಕತ್ತಲು ಕವ್ಕೊಂಡಿರುವಾಗಲೇ ಕೋಳಿ ಕೂಗೋ ಮುಂಚೆಯೇ ಎದ್ದು ಒಮ್ಮೆ ಆಕಳಿಸಿ, ಮೈಮುರಿದು ನಟಿಕೆ ತೆಗೆದು, ಕಣ್ಣುಜ್ಜುತ್ತಾ ಗೋಡೆಯ ಮೇಲಿರುವ ದೇವರ ಪಟವನ್ನು ನೋಡಿ ಕೈಮುಗಿದು, ಮನೆಯ ಮುಂಭಾಗದಲ್ಲಿ ಕಸಗುಡಿಸಿ ನೀರು ಚಿಮುಕಿಸಿ, ಬಯಲ ಕಡೆ ಹೋಗಿ ಬಂದು, ಮುಖ ತೊಳೆದು, ಒಲೆಗೆ ಸೌದೆ ಹಾಕಿ, ಪಾತ್ರೆಯಲ್ಲಿ ನೀರಿಟ್ಟ ಸಮಯಕ್ಕೆ ಸರಿಯಾಗಿ ಪೂರ್ವದಲ್ಲಿ ಸೂರ್ಯ ತೂಕಡಿಸುತ್ತಾ ಹೊರಗೆ ಬರುತ್ತಿದ್ದ. ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದ್ದ ಸುಬ್ಬಮ್ಮಳ ದಿನಚರಿ. ಸೂರ್ಯ ಮಳೆಗಾಲದ ದಿನಗಳಲ್ಲಿ ಸೋಮಾರಿಯಾಗಿ ಸ್ವಲ್ಪ ತಡವಾಗಿ ಬರಬಹುದೇ ವಿನಃ ಸುಬ್ಬಮ್ಮನ ದಿನಚರಿಯಲ್ಲಿ ಯಾವುದೇ ಬದಲಾವಣೆಯಾಗುತ್ತಿರಲಿಲ್ಲ.

ಹುಟ್ಟಿ ಸ್ವಲ್ಪ ಸಮಯಾಗುವಷ್ಟರಲ್ಲಿ ಎರಡು ಮುದ್ದೆ ತೊಳೆಸಿ, ಒಂದು ತಾನುಂಡು, ಮತ್ತೊಂದನ್ನು ರಾತ್ರಿಗೆ ಎತ್ತಿಟ್ಟು, ತನ್ನ ಪುಟ್ಟ ಮನೆಯ ಹೊರಕ್ಕೆ ಕಾಲಿಟ್ಟಳೆಂದರೆ ಕೂಲಿಗೆ ರೆಡಿಯಾಗಿ ಹೊರಟಿದ್ದಾಳೆಂದೇ ಅರ್ಥ. ಅಂದೂ ಕೂಡ ಗೌಡರ ಹೊಲಕ್ಕೆ ಕೂಲಿಗೆ ಹೊರಟಿದ್ದಳು. ರಾಮೇಗೌಡರ ಹೊಲಕ್ಕೆ ಕೂಲಿಗೆ ಹೋಗುವುದೆಂದರೆ ಸುಬ್ಬಮ್ಮನಿಗೆ ಏನೋ ಆನಂದ. ಏಕೆಂದರೆ ರಾಮೇಗೌಡರ ಮಗ ಚಿನ್ನಪ್ಪ, ಈಕೆಯ ಮಗ ಬಾಬು ಬಾಲ್ಯದಿಂದಲೂ ಒಂದೇ ವಾರಿಗೆಯ ಗೆಳೆಯರು. ಹಾಗಾಗಿ ಚಿನ್ನಪ್ಪನೊಂದಿಗೆ ಮಾತನಾಡಿದರೆ, ಸುಬ್ಬಮ್ಮನಿಗೆ ಮಗನನ್ನೇ ಕಂಡು ಮಾತನಾಡಿದಂತಾಗುತ್ತಿತ್ತು. ಬಾಲ್ಯದಲ್ಲಿ ಶಾಲೆಯಿಂದ ಬಾಬಣ್ಣನ ಜೊತೆಯಲ್ಲಿ